ಚಂಪಾ ಏಕಾಕಿಯಾಗಿ ಅದನ್ನು ನಿಭಾಯಿಸಿದ್ದ. ಹಲವು ಕಾರಣಗಳಿಗಾಗಿ ಚಂಪಾನ ಹೊಸ 'ಸಂಕ್ರಮಣ'ವನ್ನು ಒಪ್ಪದಿದ್ದರೂ ನಮ್ಮ ನಡುವೆ ಇದ್ದ ವೈಯಕ್ತಿಕ ಸಂಬಂಧಗಳಿಗೆ ಮಾತ್ರ ಚ್ಯುತಿ ಬಂದಿರಲೇ ಇಲ್ಲ. ಅವನು 'ಸಂಕ್ರಮಣ'ಕ್ಕೆ 50 ವರ್ಷ ತುಂಬಿದ ಸಮಾರಂಭವನ್ನು (2016 ಮಾರ್ಚ್ 12-13) ಬೆಂಗಳೂರಲ್ಲಿ ಏರ್ಪಡಿಸಿದ್ದ. 50 ವರ್ಷ ಮಹತ್ವದ್ದು, ಈ ಹೊತ್ತಿಗೆ ನಮ್ಮ ಮೊದಲ ಸಂಚಿಕೆ ಬಿಡುಗಡಿಸಿದ್ದ ನಾಡಿಗನನ್ನು ಆಹ್ವಾನಿಸುವುದು ಸೂಕ್ತ ಎಂದು ಹೇಳಿದೆ. ಆದರೆ, ಚಂಪಾನಿಗೆ ನಾಡಿಗನ ಬಗ್ಗೆ, ಅವನೊಡನೆ ಮುಕ್ತ ಚರ್ಚೆಗೆ ಭಯ. ಈ ಮಧ್ಯೆ ಹಲವು ವಿಷಯಗಳ ಬಗ್ಗೆ ಚಂಪಾನ ಸಾಮಾಜಿಕ ನಿಲುವುಗಳು ಸರ್ವವೇದ್ಯವಾಗಿದ್ದುವು. ಅವನನ್ನು ನಾಡಿಗ ಬಹಿರಂಗವಾಗಿ ಟೀಕಿಸುತ್ತಿದ್ದ. ಈ ಕಾರಣಕ್ಕಾಗಿ 'ಸಂಕ್ರಮಣದ 50ನೇ ವರ್ಷದ ಹಬ್ಬಕ್ಕೆ ನಾಡಿಗನನ್ನು ಆಹ್ವಾನಿಸುವುದು ಬೇಡ; ಈಗಾಗಲೇ ಒಬ್ಬರಿಗೆ ಹೇಳಿಬಿಟ್ಟಿದ್ದೇನೆ, ಈಗ ಬದಲಿಸುವುದು ಕಷ್ಟ' ಎಂದು ನೆಪ ಹೇಳಿದ. ಮೊದಲ ದಿನದ ಪ್ರಾಸ್ತಾವಿಕ ಮಾತು ಆಡಲು ನಾನು ಬರಬೇಕೆಂದು ಅಪೇಕ್ಷೆಪಟ್ಟ. ಒಪ್ಪಿದ್ದೆ. ಚಂಪಾನಿಗೆ ನಾಡಿಗನನ್ನು ಕನಿಷ್ಠ ಪಕ್ಷ ವೇದಿಕೆಯ ಮೇಲೆ ಉಪಸ್ಥಿತನಿರುವುದಕ್ಕಾದರೂ ಆಮಂತ್ರಿಸು ಎಂದೆ. ತನ್ನ ಮನೆಯ ದಾರಿಯಲ್ಲಿಯೇ ಇದ್ದ ನಾಡಿಗನ ಮನೆಗೆ ಸ್ವತಃ ಹೋಗಿ ಆಮಂತ್ರಿಸಲಿಲ್ಲ; ನಾಡಿಗನಿಗೆ 2-3 ಸಲ ಫೋನಿಸಿದ, ಮಹಾ ಸ್ವಾಭಿಮಾನಿ ನಾಡಿಗ ಅವನ ಫೋನ್ ಸ್ವೀಕರಿಸಲಿಲ್ಲ. ನಂತರ 'ಹೀಗಾಗಿದೆ, ನೀನೇ ಹೋಗಿ ಕರೆದುಕೊಂಡು ಬಾ' ಎಂದು ನನಗೆ ಹೇಳಿದ. ನಾನು ನಾಡಿಗನಿಗೆ ವಿಷಯ ತಿಳಿಸಿದೆ. ಬರಲು ಸ್ಪಷ್ಟವಾಗಿ ನಿರಾಕರಿಸಿದ ನಾಡಿಗ, 'ಚಂಪಾ ಜಾತಿವಾದಿ, ಈ ಇಡೀ ಕಾರ್ಯಕ್ರಮದಲ್ಲಿ ಸಹ ತನ್ನ ಜಾತಿತ್ವವನ್ನೇ ಮೆರೆಸಿದ್ದಾನೆ, ಅವನ ಜೊತೆ ನಾನು ಸೇರುವುದಿಲ್ಲ' ಎಂದು ಹೇಳಿದ. ನಾಡಿಗನ ನಿರಾಕರಣೆಯಲ್ಲಿ ಸತ್ಯವಿತ್ತು, ತಥ್ಯವಿತ್ತು.

* * *

ಜಿ.ಎಸ್. ಶಿವರುದ್ರಪ್ಪ ಮುಖ್ಯಸ್ಥರಾಗಿದ್ದಾಗ ಬೆಂಗಳೂರು ವಿವಿ ಕನ್ನಡ ವಿಭಾಗದಿಂದ ಪ್ರತಿ ವರ್ಷ ಉತ್ತಮ ಕಾರ್ಯಕ್ರಮಗಳು ಆಯೋಜಿತಗೊಂಡಿರುತ್ತಿದ್ದುವು. ನಾಡಿನ ಪ್ರಮುಖ ಲೇಖಕರು ಪಾಲುಗೊಂಡಿರುತ್ತಿದ್ದರು. ಕೆಲವು ಸಲ ಮುಖ್ಯ ಭಾಷಣಗಳಿಗಿಂತ ನಂತರ ನಡೆದ ಪ್ರಶ್ನೋತ್ತರ, ಅಭಿಪ್ರಾಯಗಳು ಅತ್ಯಂತ ಮಹತ್ವದವಾಗಿರುತ್ತಿದ್ದುವು. ಅಲ್ಲಿ ನಿಯಮಿತವಾಗಿ ಹಾಜರಿರುತ್ತಿದ್ದ ನಾಡಿಗ ಕೇಳುವ ಪ್ರಶ್ನೆಗಳಿಗೆ ಅಥವಾ ಹೇಳುವ, ಖುಲಾಸೆಗೊಳಿಸುವ, ಬಹಿರಂಗಪಡಿಸುವ ವಿವರಗಳಿಗೆ ಅನೇಕ ಹೆಸರಾಂತ ಲೇಖಕರು, ಬಹುತೇಕ ನಾಡಿಗನ ಗೆಳೆಯರೇ ಆಗಿದ್ದವರು ಸಹ ತತ್ತರಿಸುತ್ತಿದ್ದರು. ನಾಡಿಗನ ಇಂಗ್ಲಿಷ್ ಓದಿನ ಆಳವನ್ನು ತಿಳಿದಿರದಿದ್ದ ನಮ್ಮಂಥವರು ಬೆಚ್ಚುತ್ತಿದ್ದೆವು. ಇಂಥ ಪ್ರಸಂಗಗಳಲ್ಲಿ ಒಮ್ಮೆ ಯು.ಆರ್. ಅನಂತಮೂರ್ತಿಯವರ ಕೆಲವು ಕನ್ನಡ ಕಥೆಗಳ 'ಮೂಲ'ವನ್ನು ನಾಡಿಗ ಯಥಾವತ್ತಾಗಿ ಬಿಡಿಸಿ ಹೇಳಿದ್ದುದನ್ನು ನೆನಪಿಸಿಕೊಳ್ಳಬಹುದು. ಹೀಗಾಗಿ ಅಂಥವರು ಸಭೆಯಲ್ಲಿ ನಾಡಿಗನ ಉಪಸ್ಥಿತಿಗೆ ಬೆದರುತ್ತಿದ್ದರು. ನಾಡಿಗ ಯಾವಾಗ ಸ್ಫೋಟಿಸುತ್ತಿದ್ದನೆಂಬುದನ್ನು ಹೇಳುವುದು ಕಷ್ಟವಾಗುತ್ತಿತ್ತು.

* * *

ನಾಡಿಗ ಮುಖ್ಯವಾಗಿ ಕವಿ, ಆ ನಂತರ ವಿಮರ್ಶಕ, ಕಥೆಗಾರ, ಅನುವಾದಕ ಇತ್ಯಾದಿ. ಅವನ ಮೊದಲ ಕವನಸಂಗ್ರಹ 'ನಿಮ್ಮ ಪ್ರೇಮಕುಮಾರಿಯ ಜಾತಕ' (1964). ಅದರ ನಂತರ 'ಕಪ್ಪುದೇವತೆ' (1970), 'ಉದ್ಘಾಟನೆ' (1978), 'ಭಾವಲೋಕ' (1983), 'ದಾಂಪತ್ಯಗೀತ' (1987), 'ತಮಾಷೆಯ ಲೋಕ' (1992), 'ಕುಹೂಗೀತ' (1992), 'ನಟರಾಜ ಕಂಡ ಕಾಮನಬಿಲ್ಲು' (1994), 'ಪಂಚಭೂತಗಳು' (2000), 'ಜಡ ಮತ್ತು ಚೇತನ' (2005), 'ಏಕಾಂತ ಲೋಕಾಂತ' (2014) ಮುಂತಾದ ಕವನಸಂಗ್ರಹ ಪ್ರಕಟಿಸಿದ್ದಾನೆ. ಎರಡು ಸಲ ಸಮಗ್ರ ಕಾವ್ಯ ಸಹ ಬಂದಿವೆ.

ಬೆಂಗಳೂರಿನ ಸಪ್ನ ಪ್ರಕಾಶನದವರಿಗೆ ಪ್ರಕಾಶನ ಸಲಹೆಗಾರನಾಗಿದ್ದಾಗ ಅನೇಕ ಮಿತ್ರರ ಪುಸ್ತಕಗಳನ್ನು ಆಯ್ದು ಪರಿಶೀಲಿಸಿ ಕೊಟ್ಟಿದ್ದಲ್ಲದೇ, ತನ್ನ ಬಹುಪಾಲು ಎಲ್ಲ ಪುಸ್ತಗಳನ್ನೂ ಅವರಿಂದಲೇ ಬೆಳಕು ಕಾಣಿಸಿದ್ದ. ನಾಡಿಗ ಬರೆದ ವಿಮರ್ಶಾ ಕೃತಿಗಳಲ್ಲಿ 'ಅಡಿಗರು ಮತ್ತು ನವ್ಯಕಾವ್ಯ', 'ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು', 'ಮೌನದಾಚೆಯ ಮಾತು', 'ಕೆ.ಎಸ್.